SRI K. LAKKAPPA (MINISTER FOR PUBLIC WORKS):—

(*a*) The metalling of the road in the first 2 Miles has been completd.

Construction of culverts is under progress.

(*b*) The estimated cost of the constrction of culverts on this road ... Rs. 17,000.

The estimated cost for metalling the remaining length of 3 miles and 2 furlongs ... Rs. 20,000.

(*c*) The construction of culverts is expected to be completed by the end of June 1970.

The metalling of the remainig length of the road will be taken up, subject to availability of funds.

ಶ್ರೀ ಕೆ. ಪ್ರಭಾಕರ :—ಈ ಕೆಲಸ ಪ್ರಾರಂಭ ಮಾಡಿದ ಮೇಲೆ ಈ ವರ್ಷ ಎಷ್ಟು ಖರ್ಚಾಗಿದೆ ? ಯಾವಾಗ ಪೂರ್ತಿಯಾಗುತ್ತದೆ ?

† ಶ್ರೀ ಕೆ. ಲಕ್ಕಪ್ಪ :—ಈ ವರ್ಷದಲ್ಲಿ ೧೩,೭೩೫ ರೂಪಾಯಿ ಜಲ್ಲಿ ಹಾಕಲಿಕ್ಕೆ ಖರ್ಚು ಮಾಡಿದೆ.

ಶ್ರೀ ಕೆ. ಪ್ರಭಾಕರ :—ಇನ್ನೂ ೩ ಮೈಲಿ ೨ ಫರ್ಲಾಂಗ ರಸ್ತೆ ಮೆಟ್ಲಿಂಗ ಮಾಡುವುದು ಸಭ್ಜಕ್ಟಟು ಅವೇಲೆಬಿಲಿಟಿ ಆಫ್ ಫಂಡ್ಸ ಎಂದು ಹೇಳಿದೆ. ಯಾವಾಗ ಫಂಡ್ಸ ಒದಗಿಸಿ ಕೆಲಸ ಪೂರ್ತಿಯಾಗುತ್ತದೆ ?

ಶ್ರೀ ಕೆ. ಲಕ್ಕಪ್ಪ :—ಹಣ ಒದಗಿದ ಹಾಗೆ ಸರಕಾರ ಅದನ್ನು ಮಾಡಿಸುತ್ತದೆ. ಜಾಗ್ರತೆ ಮಾಡಬೇಕು ಎಂಬ ಉದ್ದೇಶದಿಂದ ಪ್ರಯತ್ನ ಮಾಡುತ್ತೇವೆ.

NEW COLLEGES STARTED IN THE STATE

651 Sri D. S. NADKARNI (Ankola).—

Will the Minister for Education be pleased to state :—

(*d*) the number of new colleges started in the year 1969–70 ;

(*b*) whether these colleges have been promised or paid any grants ;

(*c*) whether the students studying in these colleges have received Freeships and Scholarships ; if not the reasons therefor ;

(*d*) whether the celleges have been told earlier that the students will not be eligible for freeships, scholarships ; if not the reasons therefor ;

(*e*) whether the Government in the Education Department has any proposal before it to set right the injustice done to the students in giving free studentship in these Colleges;

SRI D. S. NADKARNI

(*f*) whether the Government has received any resolution of North Kanara District College Principals Association in this behalf; if so, the action taken on the same ?

Sri N. M. KOTRABASIAH (Sogi) Deputy Minister for Education:—

(*a*) 12.

(*b*) Government have taken a decision to extend the benefits under the Grant in aid Code of the Department of Collegiate Education, to the Private Colleges started after May 1967.

(*c*) Scholarship Committees have been recently constituted in the newly started colleges for granting Poverty-cum-Progress Scholarshi ps and fee concessions to the students of those Colleges.

(*d*) A Press Notification dated 16th April 1969 was issued by Government stating that the newly started Colleges will not be given grant-in-aid.

(*e*) Under Government letter No. ED 83 UPC 69, dated 16th January 1970 the newly started Colleges are now eligible for the various benefits under the Grant-in-aid Code. Poverty-*cum*-Progress scholarships and fee concessions will be awarded to the eligible students on the recommendations of the fee concession Committee of the concerned Colleges.

(*f*) A resolution dated 21st September 1969 has been received, but it does not touch on the question of scholarships and freeships to students.

ಶ್ರೀ ಡಿ. ಎಸ್. ನಾಡಕರ್ಣಿ :—ಹೊಸದಾಗಿ ಪ್ರಾರಂಭವಾದ ಎಲ್ಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಫ್ರೀಷಿಪ್, ಸ್ಕಾಲರ್‌ಷಿಪ್ ಕೊಡಬೇಕಾಗುತ್ತದಲ್ಲವೆ ?

ಶ್ರೀ ಎಂ. ಎನ್. ಕೊಟ್ರಬಸಯ್ಯ ಸೋಗಿ :—ಫ್ರೀಷಿಪ್ ಗ್ರಾಂಟ್ ಕಾಲೇಜುಗಳಿಗೆ ಕೊಡುತ್ತೇವೆ. ಈಗಾಗಲೇ ೩ ಕಾಲೇಜುಗಳಿಗೆ ಕೊಟ್ಟಿದೆ. ಪ್ರಪೋಜಲ್ಸ ಕಳಿಸುವುದು ತಡವಾಗಿದೆ. ಕೆಲವು ಪ್ರಪೋಜಲ್ಸ ತೃಪ್ತಿಕರವಾಗಿ ಇಲ್ಲದ ಮೂಲಕ ಡಿಫಕ್ಟ್ಸ ಸರಿಪಡಿಸಲು ವಾಪಸ್ಸು ಕಳಿಸಿಕೊಡಲಾಗಿದೆ. ಕಾಲೇಜುಗಳಿಗೂ ಸಹ ಕೊಡಬೇಕೆಂದು ಇದೆ. ಕೊಡುತ್ತೇವೆ.

ಶ್ರೀ ಡಿ. ಎಸ್. ನಾಡಕರ್ಣಿ :—ಪ್ರಪೋಜಲ್ಸ ಕಳಿಸಿಕೊಟ್ಟವರಿಗೆ ಮಾರ್ಚ್ ತಿಂಗಳ ಅಖೈರಿನೊಳಗಾಗಿ ಹೊಸ ಕಾಲೇಜುಗಳಿಗೆ ಫ್ರೀಷಿಪ್ ಹಣ ಕೊಡಿಸುವಂತೆ ಮಾಡುತ್ತಿರಾ ?

ಶ್ರೀ ಎಂ. ಎನ್. ಕೊಟ್ರಬಸಯ್ಯ ಸೋಗಿ :—ಸರಿಯಾದ ಪ್ರಪೋಜಲ್ಸ ಮಾರ್ಚ್ ತಿಂಗಳಿನಲ್ಲಿ ಕಳಿಸಿ ಕೊಟ್ಟರೆ ಮಾರ್ಚ್ ತಿಂಗಳ ಅಖೈರಿನೊಳಗಾಗಿ ೧೨ ಕಾಲೇಜುಗಳಿಗೂ ಫ್ರೀಷಿಪ್ ಸ್ಕಾಲರಷಿಪ್ ಕೊಡುವಂತೆ ಮಾಡಲಾಗುವುದುವು.

ಶ್ರೀ ಹಂಜಿ ಶಿವಣ್ಣ :—ರಾಜಕೀಯ ಸಂತ್ರಸ್ತರ ಮಕ್ಕಳಿಗೆ ಕೊಡಬೇಕಾದ ಫ್ರೀಷಿಪ್ ಸೌಲಭ್ಯ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ಎನ್. ಕೊಟ್ರಬಸಯ್ಯ ಸೋಗಿ :—ಅಂಥಾದ್ದು ಕೊಡಲಿಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಬಿ. ದೊಡ್ಡ ಬೋರೆಗೌಡ :—ಫೀ ಕನ್‌ಸೆಷನ್ ಕಮಿಟಿ ರಚನೆ ಮಾಡುವಾಗ ಆದರಲ್ಲಿ ಗುಂಪು-ಗುಳಿತನ ಮಾಡಿದ್ದಾರೆ ವಿಶಾಲ ಮನೋಭಾವದಿಂದ ಮಾಡಿಲ್ಲ. ಆದುದರಿಂದ ವಿಶಾಲ ಮನೋಭಾವ—ದಿಂದ ಎಲ್ಲ ಒಡವರಿಗೂ ನ್ಯಾಯ ದೊರಕಿಸಿ ಕೊಡುವುದಕ್ಕೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಂ. ಎನ್. ಕೊಟ್ರಬಸಯ್ಯ ಸೋಗಿ :—ಯಾವ ಅನ್ಯಾಯವಾಗಿಲ್ಲ, ಮಾನ್ಯ ಸದಸ್ಯರು ಊಹಿಸಿ ಕೊಂಡು ಹೇಳುತ್ತಿದ್ದಾರೆ. ಈ ಕಾಲೇಜು ಕಮಿಟಿ ನೇಮಕ ಮಾಡುವಾಗ ಕಾಲೇಜು ಪ್ರಿನ್ಸಿಪಾಲರೇ ಆದರ ಅಧ್ಯಕ್ಷರಾಗಿರುತ್ತಾರೆ. ಸೀನಿಯರ್ ಲೆಕ್ಚರ್‌ರ್ ರೊಬ್ಬರು ಅದರ ಸದಸ್ಯರು. ಅಲ್ಲಿಯ ಎಂ ಎಲ್ ಎ ಅವರನ್ನು ಸದಸ್ಯರನ್ನಾಗಿ ತೆಗೆದುಕೊಳ್ಳುತ್ತಾರೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ :—ಉತ್ತರ ಕನ್ನಡ ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾದ ಕಾಲೇಜು ಹೈಸ್ಕೂಲುಗಳಿಗೆ ಫ್ರೀಷಿಪ್ ದೊರೆಯುತ್ತಿಲ್ಲ. ಈ ರಿಯಾಯಿತಿ ಕೊಡಬೇಕು ಎಂದು ಸೂಚನೆ ಕೊಡುತ್ತೀರಾ ?

ಶ್ರೀ ಎಂ. ಎನ್. ಕೊಟ್ರಬಸಯ್ಯ ಸೋಗಿ :—ಹೈಸ್ಕೂಲು ಪ್ರಶ್ನೆ ಈಗ ನಮ್ಮ ಮುಂದೆ ಇಲ್ಲ. ಆದರೆ ರೂಲ್ಸ ಪ್ರಕಾರ ಎಲ್ಲರಿಗೂ ಕೊಡುತ್ತಾರೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ :-ರಾಜಕೀಯ ಸಂತ್ರಸ್ತರಿಗೆ ರಿಯಾಯಿತಿ ಇರುವುದರಿಂದ ಸಾಹುಕಾರರ ಮಕ್ಕಳು ಕೂಡ ತಾವೂ ರಾಜಕೀಯ ಸಂತ್ರಸ್ತರು ಎಂದು ರಿಕಾರ್ಡ್ ಮಾಡಿಸಿ ಸಹಾಯ ಪಡೆಯುತ್ತಿದ್ದಾರೆ. ಇದು ಗಮನಕ್ಕೆ ಬಂದಿದೆಯೇ ? ಆದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ಎನ್ ಕೊಟ್ರಬಸಯ್ಯ ಸೋಗಿ :—ಅಂಥಾದು ಗಮನಕ್ಕೆ ಬಂದಿಲ್ಲ. ಗಮನಕ್ಕೆ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಎಂ. ಇದಿನಬ್ಬ:—ಇತ್ತೀಚೆಗೆ ಹೊಸದಾಗಿ ಸ್ಥಾಪನೆಯಾಗತಕ್ಕ ಕಾಲೇಜುಗಳಿಗೆ ಸಾಕಷ್ಟು ಕೋಣೆಗಳು ಮತ್ತು ಆಟದ ಮೈದಾನಗಳೂ ಇರುವುದಿಲ್ಲ ಎಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಂ.ಎ. ಕೊಟ್ರಬಸಯ್ಯ ಸೋಗಿ:—ಯೂನಿವರ್ಸಿಟಿಗೆ ಸಂಬಂಧಪಟ್ಟ ಹಾಗೆ ಒಂದು ಸಮಿತಿ ಇರುತ್ತದೆ. ಆ ಕಾಲೇಜು ಸ್ಥಾಪನೆಯಾದ ನಂತರ ಅಫಿಲಿಯೇಷನ್ನಿಗೆ ಅರ್ಜಿಯನ್ನು ಹಾಕಿಕೊಂಡಾಗ ಆ ಸಮಿತಿಯವರು ಅಲ್ಲಿಗೆ ಹೋಗಿ ಆ ವಿಚಾರಗಳನ್ನೆಲ್ಲಾ ಪರಿಶೀಲನೆಮಾಡಿ ಆ ಯೂನಿವರ್ಸಿಟಿಗೆ ಒಂದು ವರದಿಯನ್ನು ಒಪ್ಪಿಸಿದ ನಂತರ ಅಫಿಲಿಯೇಷ್ನ ಕೊಡುತ್ತಾರೆ. ಅದರಲ್ಲಿ ಸರ್ಕಾರದವರ ಪಾತ್ರವೇನೂ ಇರುವುದಿಲ್ಲ. ಆದರೆ ಸರ್ಕಾರದವರು ಅವುಗಳಿಗೆ ಅನುದಾನವನ್ನು ಮಾತ್ರ ಕೊಡುತ್ತಾರೆ.

SRI B.B. SAYANAK:—Is the Jyothi College of Belgaum included in these 12 colleges which were started last year?

SRI N.M. KOTRABASAIAH SOGI;—It is not included in the list.

ಶ್ರೀ ಕೆ. ಪ್ರಭಾಕರ್:—ಸ್ಕಾಲರ್‌ಷಿಪ್ಪುಗಳನ್ನು ವಿಮರ್ಶೆ ಮಾಡತಕ್ಕ ಕಾಲದಲ್ಲಿ ವಿವೇಚನೆಯಿಲ್ಲದೆ ಗ್ರಾಸ್ ಇನ್‌ಕಂ ಎಷ್ಟು ನೆಟ್ ಇನ್‌ಕಂ ಎಷ್ಟು ಎಂಬುದನ್ನು ಬರೆಯುವುದರಲ್ಲಿ ಅನೇಕ ತಪ್ಪು ಗಳಾಗಿರುತ್ತವೆ. ಅದನ್ನು ಸರಿಪಡಿಸುವುದಕ್ಕೇನು ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಎಂ.ಎ. ಕೊಟ್ರಬಸಯ್ಯ ಸೋಗಿ:—ಅಲ್ಲಿನ ಕಮಿಟಿಯವರು ಶಿಫಾರ್ಸು ಮಾಡಿದ ಪ್ರಕಾರ ಸರ್ಕಾರದವರು ಸ್ಕಾಲರ್‌ಷಿಪ್ಪುಗಳನ್ನು ಮಂಜೂರು ಮಾಡುತ್ತಾರೆ.